489(858) ಶ್ರೀ ಹೆಚ್ ನಿಂಗಪ್ಪ (ಕುಣಿಗಲ್) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕುಣಿಗಲ್ ಕ್ಷೇತ್ರದ ಹೆಬ್ಬೂರಿನಲ್ಲಿ ಪ್ರಾರಂಭವಾಗಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ, ಪೀಠೋಪಕರಣ, ಬೋಧಕ, ಬೋಧಕೇತರ ಸಿಬ್ಬಂದಿ ಇಲ್ಲದೆ ಇರುವುದರಿಂದ ಸರ್ಕಾರ ಇವುಗಳನ್ನು ಪೂರೈಸಲು ಕ್ರ ಕೈಗೊಳ್ಳುವುದೇ,

ಆ) ಹಾಗಿದ್ದಲ್ಲಿ ಎಷ್ಟು ಸಮಯದೊಳಗಾಗಿ ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿ ಕಾಲೇಜು ಸುಲಲಿತವಾಗಿ ಕಾರ್ಯನಿರ್ವಹಿಸಲು ಅನುವು ಮಾಡಿಕೊಡಲಾಗುತ್ತಿದೆ

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಹೌದು

ಆ) ಆದಷ್ಟೂ ಜಾಗ್ರತೆ

490(563) ಶ್ರೀ ಪಾಟೀಲ್ ಸಿ ಸಿ(ನರಗುಂದ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬ್ಯಾಂಕ್ ಹಾಗೂ ಹಣಕಾಸು ಸಂಸ್ಥೆಗಳಿಂದ ಮಂಜೂರಾದ ರೈತರ ಸಾಲಗಳಿಗೆ ಬಡ್ಡಿ ಸಹಯಧನವನ್ನು ಒದಗಿಸಲು ಸರ್ಕಾರ ತೀರ್ಮಾನಿಸಿದೆಯೆ?

ಆ) ಶೇ ಎಷ್ಟು ಸಹಾಯಧನ ಒದಗಿಸಲಾಗುವುದು?

ಇ) ಇದು ಎಂದಿನಿಂದ ಜಾರಿಗೆ ಬರಲಿದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಸಹಕಾರ ಬ್ಯಾಂಕ್‌ಗಳು ಮತ್ತು ಸಹಕಾರ ಸಂಸ್ಥೆಗಳು ರೈತರಿಗೆ ಶೇ 6ರ ಬಡ್ಡಿ ದರದಲ್ಲಿ ಸಾಲ ನೀಡಲು ಅನುಕೂಲವಾಗುವಂತೆ ಸರ್ಕಾರವು ಸಹಾಯಧನ ಒದಗಿಸಲು ತೀರ್ಮಾನಿಸಿದೆ.

ಆ) ಈ ಉದ್ದೇಶಕ್ಕಾಗಿ 2004–05ರ ಆಯವ್ಯಯದಲ್ಲಿ 60 ಕೋಟಿ ರೂ ಗಳನ್ನು ಒದಗಿಸಲಾಗಿದೆ

ಇ) ಆಯವ್ಯಯಕ್ಕೆ ವಿಧಾನಮಂಡಲದ ಅನುಮೋದನೆ ದೊರೆತ ನಂತರ ಇದು ಜಾರಿಗೆ ಬರುತ್ತದೆ

492(260) ಶ್ರೀ ಡಿ ಆರ್ ಪಾಟೀಲ್ (ಗದಗ್) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸರ್ಕಾರ ಎ ಪಿ ಎಂ ಸಿ ಗಳಿಗೆ ಚುನಾವಣೆಗಳನ್ನು ಯಾವಾಗ ನಡೆಸಲಾಗುವುದು

ಆ) ರಾಜ್ಯ ಉಚ್ಚ ನ್ಯಾಯಾಲಯಕ್ಕೆ ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರ ಮುಚ್ಚಳಿಕೆ ಬರೆದುಕೊಟ್ಟಿದೆಯೇ

ಇ) ಕೊಟ್ಟಿದ್ದಲ್ಲಿ ಆ ಮುಚ್ಚಳಿಕೆಯ ವಿವರಗಳೇನು

ಈ) ನ್ಯಾಯಾಲಯಕ್ಕೆ ಮುಚ್ಚಳಿಕೆಯಲ್ಲಿ ನೀಡಿರುವ ವಚನದಂತೆ ನಡೆದುಕೊಳ್ಳಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

ಶ್ರೀ ಪ್ರಕಾಶ್ ಬಿ ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಪ್ರಸ್ತುತ ಡಿಸೆಂಬರ್ 2004ರವರೆಗೆ ಮುಂದೂಡಲು ತೀರ್ಮಾನಿಸಲಾಗಿದೆ.

ಆ) ಇಲ್ಲ